this strengthens our own apprehensions and suspicions in our minds Many of the Ministers are not worried what is going on in the Assembly, but they are worried about what is going on in Bijapur or Dharwar or Turvekere. Our apprehensions are getting deeper and deeper day by day as the session is going on.

†Sri B. D. JATTI (Minister for Finance).—Sir, the Hon'ble Minister for Education has gone to Delhi for an important work. If the Hon'ble Members want that the question should be replied, we can reply. If they feel that he should come and reply, we have no objection.

Sri S. M. KRISHNA.—Is there not a Deputy Minister in charge of the Education port-folio?

Sri B. D. JATTI.—She is dealing with primary education. So it may not be possible for her to reply.

Mr. SPEAKER.—Anyway some arrangement should be made beforehand. The House should not be left in the lurch. If it is a question of going to Delhi, it does not come about overnight. Well in advance, before the matter goes to press if intimation is received, we can withhold such questions and such situations can be avoided. It is not proper to take it as a matter of routine and think that in the normal course questions will be held over, and it embrases me and causes annoynance to the House.

Next Question may be taken up.

Ploughing Tractors sanctioned and purchased for South Kanara District

*Q.—873. Sri S. GOPALA SALENNA (Mudabidri).—

Will the Government be pleased to state :—

(*a*) the number of ploughing tractors sanctioned and purchased for South Kanara District by the Department of Agriculture with its year of purchase ;

(*b*) the number of ploughing tractors available in the Department of Agriculture in South Kanara District for the use of the Agriculturists, at present ;

(*c*) the number of applications pending for the use of ploughing tractors in South Kanara, since the purchase of tractors, if any ?

A.—Sri H C. BORAIAH (Parliamentary Secretary to the Minister for Agriculture).—

(*a*) No ploughing tractor was sanctioned or purchased for South Kanara District.

(*b*) There is one tractor assigned to South Kanara District but it is under repairs at M.M.S. Unit, Mysore.

(*c*) Does not arise in view of answer given to (*a*) above.

ಶ್ರೀ ಎಸ್. ಗೋಪಾಲ ಸಾಲೆನ್ನ.—ಈ ಟ್ರಾಕ್ಟರು ರಿಪೇರಿಗೆ ಹೋಗಿ ಎಷ್ಟು ಕಾಲ ಆಯಿತು ?

ಶ್ರೀ ಎಚ್. ಸಿ. ಬೋರಯ್ಯ.—ರಿಪೇರಿ ಆಗಿ ಈಗ ಅದನ್ನು ಬೇರೆಕಡೆ ಎನ್ನತಕ್ಕ ಜಾಬಿಯನ್ ರೆಪ್ಯೂಜಿ ಕಾಲೋನಿಗೆ ಕಳುಹಿಸಿದ್ದೇವೆ.

Sri SANJEEVANATH AIKALA.—Is it a fact that this tractor and several bull-dozers in South Kanara are always on the sick list?

ಶ್ರೀ ಎಚ್. ಸಿ. ಬೋರಯ್ಯ.—6 ಬುಲ್‌ಡೋಜರಗಳು ಇದ್ದವು, ಅವು ಉತ್ತಮ ಸ್ಥಿತಿಯಲ್ಲಿ ಇರಲಿಲ್ಲ ಅವನ್ನು ತರಿಸಿಕೊಂಡು ಇದ್ದೇವೆ, ಟ್ರ್ಯಾಕ್ಟರುಗಳೂ ಕೂಡ ಉತ್ತಮ ಸ್ಥಿತಿಯಲ್ಲಿ ಇರಲಿಲ್ಲ ಅವನ್ನೂ ಕೂಡ ತರಿಸಿಕೊಂಡು ಎಂ. ಎಂ. ಎಸ್. ಯುನಿಟ್‌ನಲ್ಲಿ ರಿಪೇರಿ ಮಾಡಿ ಟಿಬಿಯನ್ ರೆಫ್ಯೂಜಿ ಕಾರ್ಯೋನಿಗೆ ಕೆಲಸ ಮಾಡುವುದಕ್ಕೆ ಕಳುಹಿಸಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಂಗಳೂರಿನಲ್ಲಿ ರಿಪೇರಿ ಮಾಡತಕ್ಕ ವರ್ಕ್‌ಷಾಪ್ ಇಲ್ಲವೇ?

ಶ್ರೀ ಎಚ್. ಸಿ. ಬೋರಯ್ಯ.—ಇಲ್ಲ. ಮೈಸೂರಿನಲ್ಲಿ ಒಂದು ಮೊಬೈಲ್ ಮೇನಟೆನೆನ್ಸ್ ಸರ್ವೀಸ್ ಯೂನಿಟ್ ಅಂತ ಇದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮೊಬೈಲ್ ಯೂನಿಟ್ ಒಂದೊಂದು ಕಡೆಗೆ ಬಂದು ಕೆಲಸ ಮಾಡುವುದಕ್ಕೆ ಒಂದು ತಿಂಗಳು ಎರಡು ತಿಂಗಳು ಆಗುತ್ತದೆ. ಅದಕ್ಕೋಸ್ಕರ ಎಲ್ಲ ಟ್ರ್ಯಾಕ್ಟರ್ ಇರುತ್ತದೆಯೋ ಅಲ್ಲೆ ವರ್ಕ್‌ಷಾಪ್ ಇಟ್ಟು ಅವನ್ನು ರಿಪೇರಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಸಿ. ಬೋರಯ್ಯ.—ಅಂಶಹ ತೊಂದರೆ ಇದ್ದರೆ ಬಹುಶಃ ಅದನ್ನು ಪರಿಶೀಲನೆ ಮಾಡಬಹುದಾಗಿತ್ತು.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಡಿಪಾರ್ಟ್‌ಮೆಂಟರ್ ಟ್ರ್ಯಾಕ್ಟರು ಅದು ಸೌತ್ ಕೆನರಾ ಡಿಸ್ಟ್ರಿಕ್ಟ್‌ಗಾದರೂ ಹೋಗಲಿ ಯಾವ ಡಿಸ್ಟ್ರಿಕ್ಟ್‌ಗಾದರೂ ಹೋಗಲಿ—ಹೋಗಿ ಅಲ್ಲಿ ಅದಕ್ಕೆ ಖಾಯಿಲೆ ಬಂದರೆ ಅದಕ್ಕೆ ಸಂಬಂಧಪಟ್ಟ ಡಿಪಾರ್ಟ್‌ಮೆಂಟರ್ ಹೆಡ್ ಡಿಸ್ಟ್ರಿಕ್ಟ್‌ನಲ್ಲಿದ್ದರೂ ಕೂಡ ಅದರ ಬಗ್ಗೆ ಗಮನ ಕೊಡದೇ ಇರುವುದು ಗೊತ್ತಿದೆಯೇ! ಉದಾಹರಣೆಗೆ ಹಾಸನ ಡಿಸ್ಟ್ರಿಕ್ಟ್‌ನಲ್ಲಿ ಒಂದು ಟ್ರ್ಯಾಕ್ಟರ್ ಕೆಟ್ಟು ಹೋಗಿ ಒಂದು ವರ್ಷವಾದರೂ ರಿಪೇರಿ ಆಗದೇ ಹಾಗೆಯೇ ಇರುವುದು ಗೊತ್ತಿದೆಯೇ!

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರ ನನಗೆ ಗೊತ್ತಿಲ್ಲ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಈ ಜಿಲ್ಲೆಗಳಲ್ಲಿ ಇದ್ದಂಥ ಟ್ರ್ಯಾಕ್ಟರು ಮತ್ತು ಬುಲ್‌ಡೋಜರುಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಆದ್ದರಿಂದ ಈ ಯೂನಿಟ್ಟುಗಳನ್ನು ಬಂದು ಮಾಡಿ ರೈತರಿಗೇ ಹಂಡುವ ವ್ಯವಸ್ಥೆಯನ್ನು ಸರ್ಕಾರದವರು ಕೈಕೊಳ್ಳುವರೇ?

ಶ್ರೀ ಎಚ್. ಸಿ. ಬೋರಯ್ಯ.—ಸರ್ಕಾರದವರು ಆ ರೀತಿ ಒಂದು ತೀರ್ಮಾನವನ್ನು ತೆಗೆದು ಕೊಂಡಿದ್ದಾರೆ.

Sri A. P. APPANNA.—Is there a scheme before the Government to maintain the tractors by the Government in every district and to hire it out for the farmers for ploughing?

ಶ್ರೀ ಎಚ್. ಸಿ. ಬೋರಯ್ಯ.—ಇಲ್ಲ, ಯೋಜನೆ ಇತ್ತು. ಈಗ ಅದನ್ನು ರದ್ದು ಮಾಡಬೇಕೆಂದು ಸರ್ಕಾರದವರು ತೀರ್ಮಾನವನ್ನು ಕೈಕೊಂಡಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—(ಸಿ) ಪ್ರಶ್ನೆಗೆ ಉತ್ತರವಾಗಿ 'ಇದು ಉದ್ಭವಿಸುವುದಿಲ್ಲ' ಎಂದು ಹೇಳಿದ್ದೀರಿ. ಎಷ್ಟು ಅರ್ಜಿಗಳು ಬಂದಿದ್ದವು?

ಶ್ರೀ ಎಚ್. ಸಿ. ಬೋರಯ್ಯ.—ಕೇಳಿರತಕ್ಕ ಪ್ರಶ್ನೆಗೆ ತಕ್ಕಂತೆ ಉತ್ತರ ಇದೆ.

ಶ್ರೀ ಆರ್. ಎಸ್. ಪಾಟೀಲ್.—ಯೂನಿಟ್‌ಗೆ ಬದಲಾಗಿ ಇಂಡಿವಿಜ್ಯುಯರ್ಸ್‌ಗೆ ಕೊಡತಕ್ಕ ಯೋಚನೆ ಇದೆ ಎಂದು ಹೇಳಿದಿರಿ. ಎಲ್ಲರಿಗೂ ಕೊಳ್ಳುವುದಕ್ಕೆ ತಾಕತ್ ಇದೆಯೇ! ಬಡವರು ಟ್ರ್ಯಾಕ್ಟರುಗಳನ್ನು ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ!

ಶ್ರೀ ಎಚ್. ಸಿ. ಬೋರಯ್ಯ.—ಯಾರ್ಯಾರಿಗೆ ಅವುಗಳನ್ನು ಉಪಯೋಗಿಸುವುದಕ್ಕೆ ತಾಕತ್ ಇದೆಯೋ ಅಂತಹವರು ಅದರ ಉಪಯೋಗವನ್ನು ಪಡೆಯಬಹುದು.

ಶ್ರೀ ಎಸ್. ಗೋಪಾಲ ಸಾಲೆನ್ನ.—(ಸಿ) ಪ್ರಶ್ನೆಗೆ ಉತ್ತರವಾಗಿ ಅದು ಉದ್ಭವಿಸುವುದಿಲ್ಲ ಎಂದು ಹೇಳುತ್ತೀರಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟ್ರ್ಯಾಕ್ಟರುಗಳಿಗೆ ಅರ್ಜಿಗಳೇ ಬರಲಿಲ್ಲ ಎಂದು ಹೇಳುತ್ತೀರಾ?

ಶ್ರೀ ಎಚ್. ಸಿ. ಬೋರಯ್ಯ.—ತಾವು ಕೇಳಿರತಕ್ಕ ಪ್ರಶ್ನೆಗೆ ತಕ್ಕ ಉತ್ತರ ಹೇಳಿದ್ದೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಎಷ್ಟು ಅರ್ಜಿಗಳು ಬಂದಿದ್ದವು, ಎಷ್ಟು ಜನ ಟ್ರ್ಯಾಕ್ಟರುಗಳನ್ನು ಕೇಳಿದ್ದಾರೆ ಎಂದು ಪ್ರಶ್ನೆ ಕೇಳಿರುವಾಗ ಅದು ಉದ್ಭವಿಸುವುದಿಲ್ಲ ಎಂದು ಹೇಳುವುದಕ್ಕೆ ಬದಲಾಗಿ ಸರಿಯಾದ ಉತ್ತರವನ್ನು ಹೇಳಬಹುದಾಗಿತ್ತು.

Mr. SPEAKER.—Whether any applications have been received, is the point.

ಶ್ರೀ ಎಚ್. ಸಿ. ಬೋರಯ್ಯ.—ಅಲ್ಲಗೆ ಹೊಸ ಟ್ರಾಕ್ಟರ್ ಯಾವುದೂ ವಂಜುರಾಗಿಲ್ಲ, ಕೊಂಡೂ ಇಲ್ಲ. ಅಲ್ಲ ಒಂದು ಅಪ್ಲಿಕೇಷನ್ ಮಾತ್ರ ಬಂದಿತ್ತು.

ಶ್ರೀ ವಿ. ಎಂ. ದೇವ್.—ಒಂದು ಟ್ರಾಕ್ಟರು ಎಂ. ಎಂ. ಎಸ್.ನಲ್ಲ ರೀಪೆರಿಯಲ್ಲಿದೆ ಎಂದು ಹೇಳಿದ್ದಾರೆ. ಇಲ್ಲಿಯವರೆಗೆ ಈ ಟ್ರಾಕ್ಟರು ಎಷ್ಟು ಮೈಲೇಜ್ ಅಥವಾ ಎಷ್ಟು ಎಕರೆ ಭೂಮಿಯನ್ನು ಉತ್ತಿದೆ ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ದ. ಕ. ಜಿಲ್ಲೆಗೆ ಟ್ರಾಕ್ಟರಿನ ಅಗತ್ಯವಿಲ್ಲವೋ ಅಥವಾ ಅಲ್ಲಗೆ ಟ್ರಾಕ್ಟರನ್ನು ಒದಗಿಸಲಿಕ್ಕೆ ಆಗಿಲ್ಲವೋ ?

ಶ್ರೀ ಎಚ್. ಸಿ. ಬೋರಯ್ಯ.—ಅಲ್ಲ ಇದಕ್ಕೆ ಡಿಮ್ಯಾಂಡೇ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೆಚ್ಚು ಆಹಾರ ಬೆಳೆಸಬೇಕೆಂಬ ಮಾರ್ಗದಲ್ಲಿ ತಾವು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಜಿ. ನಾರಾಯಣ ಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ದ. ಕ. ಜಿಲ್ಲೆಗೂ ಟ್ರಾಕ್ಟರುಗಳನ್ನು ಒದಗಿಸಿದ್ದೇವೆ. ಇಲ್ಲಿಗೆ ಸುಮಾರು 240 ಚಿಲ್ಲರೆ ಟ್ರಾಕ್ಟರುಗಳನ್ನು ರೈತರಿಗೆ ಒದಗಿಸಿದ್ದೇವೆ.

Sri G. V. GOWDA.—On what basis Government have come to the conclusion that there is no demand in South Kanara for tractors ?

ಶ್ರೀ ಎಚ್. ಸಿ. ಬೋರಯ್ಯ.—ಇದಕ್ಕೆ ತಾವು ಒಂದು ಬೇರೆ ಪ್ರಶ್ನೆ ಹಾಕಿದರೆ ಉತ್ತರವನ್ನು ಒದಗಿಸಲಾಗುತ್ತದೆ. ಅಲ್ಲ ಯಾರೂ ಇದಕ್ಕೆ ಅರ್ಜಿಯನ್ನೇ ಹಾಕಿಲ್ಲ.

Sri A. P. APPANNA.—Government was pleased to say that there was a scheme to supply tractors to the farmers on hire basis and also Government has said that that scheme was dropped. What are the reasons that weighed in favour of dropping that scheme and will the Government consider implementing that scheme in view of the fact that we have to produce more in the agricultural field ?

ಶ್ರೀ ಎಚ್. ಸಿ. ಬೋರಯ್ಯ.—ತಾವು ಬೇರೆ ಪ್ರತ್ಯೇಕ ಒಂದು ಪ್ರಶ್ನೆ ಕಳುಹಿಸಿದರೆ ಉತ್ತರವನ್ನು ಒದಗಿಸಲಾಗುತ್ತದೆ.

ಶ್ರೀಮತಿ ಬನವರಾಜೇಶ್ವರಿ.—ಈ ಟ್ರಾಕ್ಟರನ್ನು ಕೊಂಡುಕೊಳ್ಳತಕ್ಕವರಿಗೆ ಏಕ್‌ದಂ ಹಣ ಕಟ್ಟಿ ಎಂದು ಒತ್ತಾಯ ಮಾಡುವ ಬದಲು ಇದನ್ನು ಕಂತುಗಳಮೇಲೆ ಕೊಡಲು ಏಕೆ ಸಾಧ್ಯವಿಲ್ಲ ?

ಶ್ರೀ ಎಚ್. ಸಿ. ಬೋರಯ್ಯ.—ಪ್ರತ್ಯೇಕ ಪ್ರಶ್ನೆ ಹಾಕಿ ಉತ್ತರ ಒದಗಿಸುತ್ತೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಪಾಯಿಂಟ್ ಆಫ್ ಆರ್ಡರ್, ಸಾರ್. ಅಧ್ಯಕ್ಷರೇ ನಮ್ಮ ಕಡೆ ಏನಾದರೂ ಸ್ವಲ್ಪ ತಪ್ಪಿದ್ದರೆ ತಾವು ಕುಣಿಸಿಬಿಡುತ್ತೀರಿ. ಸರ್ಕಾರದವರು ಇಂಥ ತಪ್ಪು ಉತ್ತರಗಳನ್ನು ಕೊಟ್ಟಾಗ ತಾವು ಅವರಮೇಲೆ ಯಾವ ಕ್ರಮವನ್ನೂ ಕೈಗೊಳ್ಳದೆ ಇರುವುದು ಸರಿಯೇ ?

Mr. SPEAKER.—The Hon'ble Member is so much sincere and engrossed in the question. If the Government gives wrong, answers, there is no point of order. The Hon'ble Member may have remedy to throw out the Government.

Sri S. S. KOLKEBAIL.—When was the tractor first sent to South Kanara District ?

ಶ್ರೀ ಎಚ್. ಸಿ. ಬೋರಯ್ಯ.—ತಾರೀಖನ್ನು ಹೇಳುವುದಕ್ಕಾಗುವುದಿಲ್ಲ. ಅಲ್ಲ ಅದು ಸ್ಪೇಟ್ ರೀ-ಆರ್ಗನೈಜೇಷನ್ ಆಗುವುದಕ್ಕೆ ಮುಂಚೆಯೇ ಅಲ್ಲಿತ್ತು. ಅಲ್ಲಿಂದ ಅರ್ಜಿಗಳ್ಯಾವೂ ನಮಗೆ ಬಂದಿಲ್ಲ. ಒಂದೇ ಒಂದು ಅರ್ಜಿ ಮಾತ್ರ ಬಂದಿತ್ತು.

———